# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಕಾ.ಪಾ.ಅ (ಯೋ–ಪ)/ಪಿಆರ್/459/12–13

ಕಾರ್ಯಪಾಲಕ ಅಭಿಯಂತರರ ಕಛೇರಿ
ಯೋಜನೆ–ಪಶ್ಚಿಮ ವಿಭಾಗ
ದಾಸಪ್ಪ ಹೆರಿಗೆ ಆಸ್ಪತ್ರೆ ಆವರಣ, ಎಸ್.ಜೆ.ಪಿ ರಸ್ತೆ
ಬೆಂಗಳೂರು–02. ದಿನಾಂಕ: 04–02–2013

## ಹರಾಜು ಪ್ರಕಟಣೆ

**ವಿಷಯ:– 1. ದಯಾನಂದ ನಗರ ವಾರ್ಡ್ ಸಂಖ್ಯೆ:97 ರ ಶ್ರೀರಾಂಪುರಂ ರೆಫೆರಲ್ ಆಸ್ಪತ್ರೆ ನಿರ್ಮಾಣ/ಅಭಿವೃದ್ಧಿ ಕಾಮಗಾರಿ**

**2. ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್ ಸಂಖ್ಯೆ : 119ರಲ್ಲಿ ದಾಸಪ್ಪ ಆಸ್ಪತ್ರೆ ಆವರಣದ ಕಾಪಾಅ(ಯೋ–ಪ)ರವರ ಕಛೇರಿ ಕಟ್ಟಡ ಅಭಿವೃದ್ಧಿ ಕಾಮಗಾರಿಗಳಲ್ಲಿ ದೊರೆತ ಅನುಪಯುಕ್ತ ಹಳೆ ಸಾಮಗ್ರಿಗಳನ್ನು ಹರಾಜು ಹಾಕುವ ಬಗ್ಗೆ.**

ಕಾರ್ಯಪಾಲಕ ಅಭಿಯಂತರರು, ಯೋಜನೆ (ಪಶ್ಚಿಮ) ವಿಭಾಗದ ವ್ಯಾಪ್ತಿಯಲ್ಲಿ ಈ ಕೆಳಕಂಡ ಸಾಮಗ್ರಿ/ವಸ್ತುಗಳನ್ನು ದಿನಾಂಕ: 14–02–2013ರಂದು ಬೆಳಿಗ್ಗೆ 11–00 ಗಂಟೆಗೆ ಕಾಪಾಅ, ಯೋಜನೆ (ಪಶ್ಚಿಮ) ವಿಭಾಗ, ದಾಸಪ್ಪ ಹೆರಿಗೆ ಆಸ್ಪತ್ರೆ ಆವರಣ, ಬೆಂಗಳೂರು–2 ಇಲ್ಲಿ ಬಹಿರಂಗವಾಗಿ ಹರಾಜು ಹಾಕಲು ಉದ್ದೇಶಿಸಲಾಗಿದೆ. ವಿವರಗಳು ಕೆಳಕಂಡಂತಿರುತ್ತದೆ.

ದಯಾನಂದನಗರ ವಾರ್ಡ್ ಸಂಖ್ಯೆ 97ರ ಶ್ರೀರಾಮಪುರ ರೆಫರಲ್ ಆಸ್ಪತ್ರೆ ನಿರ್ಮಾಣ/ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಯನ್ನು ಕೈಗೊಳ್ಳುವ ಸಮಯದಲ್ಲಿ ಹಲವು ಅನುಪಯುಕ್ತ ಹಳೆ ಸಾಮಗ್ರಿಗಳು ದೊರೆತಿದ್ದು, ಸದರಿ ಸಾಮಗ್ರಿಗಳು ಅವುಗಳ ವಿವರ ಈ ಕೆಳಕಂಡಂತಿದೆ.

1. Wo0den Doors & Windows Shutters
 a) Fully panelled shutters= **27.91 Sqm**, b) Fully glazed shutters = **3.39 Sqm**,
 & c) Sandwich Door Shutters =**2.69 Sqm**
2. M.S.Gate = 9.00 Sqm
3. Collapsible gate = 9.18 Sqm (Opening measurement)

ವಾರ್ಡ್ ಸಂಖ್ಯೆ 119ರ ದಾಸಪ್ಪ ಆಸ್ಪತ್ರೆಯ ಆವರಣದೊಳಗಿನ ಕಾರ್ಯಪಾಲಕ ಅಭಿಯಂತರರು, ಯೋಜನೆ–ಪಶ್ಚಿಮ ವಿಭಾಗ ಕಛೇರಿ ಕಟ್ಟಡದ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಯನ್ನು ಕೈಗೊಳ್ಳುವ ಸಮಯದಲ್ಲಿ 8 (ಎಂಟು) ಅನುಪಯುಕ್ತ ಹಳೆ ಕಿಟಕಿಗಳು ದೊರೆತಿದ್ದು, ಅವುಗಳ ವಿವರ ಈ ಕೆಳಕಂಡಂತಿದೆ.

1. M.S. fully glazed windows = 17.28 Sqm

ಈ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಈ ಕೆಳಕಂಡ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

**ಷರತ್ತುಗಳು:**

1) ಹರಾಜಿನಲ್ಲಿ ಭಾಗವಹಿಸುವ ಈ ಕಛೇರಿಯ ರಜಾ ದಿನಗಳು ಹೊರತುಪಡಿಸಿ ಕಾರ್ಯನಿರ್ವಹಿಸುವ ದಿನಗಳಲ್ಲಿ ಕಛೇರಿ ಸಂಪರ್ಕಿಸಿ ಠೇವಣಿ ಹಣ ರೂ.20,000/– (ರೂ.ಇಪ್ಪತ್ತು ಸಾವಿರಗಳು ಮಾತ್ರ)ಗಳನ್ನು ಪಾವತಿಸಿ ತಮ್ಮ ಹೆಸರನ್ನು ನೊಂದಾಯಿಸುವುದು.
2) ಅರ್ಹ ಬಿಡ್‌ದಾರರಿಗೆ ಬಿಡ್ ಮಾಡಿರುವ ಮೊತ್ತವನ್ನು ಒಪ್ಪುವುದು ಅಥವಾ ತಿರಸ್ಕರಿಸುವುದರ ಬಗ್ಗೆ ಅಧಿಕಾರವನ್ನು ಬಿ.ಬಿಎಂ.ಪಿ.ಯು ಹೊಂದಿರುತ್ತದೆ.
3) ಮೇಲೆ ತಿಳಿಸಿರುವ ಸಾಮಗ್ರಿಗಳನ್ನು ಅರ್ಹ ಬಿಡ್‌ದಾರರು ಸದರಿ ಸ್ಥಳದಿಂದ ತಮ್ಮ ಸ್ವಂತ ಖರ್ಚಿನಲ್ಲಿಯೇ ಒಡೆದುಹಾಕಿ ಬೇರೆ ಸ್ಥಳಕ್ಕೆ ನಗರ ಪಾಲಿಕೆಯಿಂದ ಆದೇಶನೀಡಿದ ಕೂಡಲೇ ತೆಗೆದುಕೊಂಡು ಹೋಗುವುದು.
4) ಬಿಡ್ ಒಪ್ಪಿಗೆ ಆದ ಮೂರು ದಿನಗಳಲ್ಲಿ ಮುಂಗಡ ಹಣ ಹೊರತು ಪಡಿಸಿ ಉಳಿದ ಬಿಡ್ ಹಣವನ್ನು ಮೂರು ದಿನದೊಳಗೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರ ಹೆಸರಿನಲ್ಲಿ ಡಿ.ಡಿ. ಮುಖಾಂತರ ಪಾವತಿಸಲು ಬದ್ಧರಾಗಿರಬೇಕು.
5) ಹರಾಜು ಪ್ರಕ್ರಿಯೆಯನ್ನು ನಡೆಸುವುದು/ಮುಂದೂಡುವುದು/ರದ್ದು ಪಡಿಸುವುದರ ಬಗ್ಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿರ್ಧಾರವೇ ಅಂತಿಮವಾಗಿರುತ್ತದೆ.
6) ವಾ–97 ದಯಾನಂದನಗರದ ವ್ಯಾಪ್ತಿಯಲ್ಲಿ ಬರುವ ಶ್ರೀರಾಮಪುರ ರೆಫರಲ್ ಆಸ್ಪತ್ರೆಯಲ್ಲಿರುವ ಅನುಪಯುಕ್ತ ಸಾಮಗ್ರಿಗಳನ್ನು ಸದರಿ ಸ್ಥಳದಲ್ಲೇ ಪರಿಶೀಲಿಸಬಹುದಾಗಿದೆ.

ಕಾರ್ಯನಿರ್ವಾಹಕ ಅಭಿಯಂತರರು
ಯೋಜನೆ ಪಶ್ಚಿಮ ವಿಭಾಗ ಬಿಬಿಎಂಪಿ